

# ಎಲೆಲೇ ಎಲೆ ಬಳ್ಳಿಯೇ...

ಮನೆಗಳ ಅಂಗಳದಲ್ಲಿ ಕಾಣುವ ವೀಳ್ಯದೆಲೆಯ ಬಳ್ಳಿಯನ್ನು ಅದರ ಬೆಳವಣಿಗೆಗೆ ಅನುಸಾರವಾಗಿ ಕತ್ತರಿಸುವುದು ಸಹಜ ಪ್ರಕ್ರಿಯೆ. ಹೀಗೆ ಬೆಳೆಸಿದ ಬಳ್ಳಿಯನ್ನು ಹರಿಯದೆ (ಕತ್ತರಿಸದೆ) ಬಿಟ್ಟರೂ ಅದು ಮನೆಗಳ ಅಂಗಳದಲ್ಲಿ ಸೊಂಪಾಗಿ ಬೆಳೆಯುವುದು ಅಪರೂಪ. ಆದರೆ, ನಮ್ಮ ಮನೆಯ ಮುಂದೆ ಬೆಳೆದಿರುವ ವೀಳ್ಯದೆಲೆಯ ಬಳ್ಳಿಯು ನನಗೇ ಆಶ್ಚರ್ಯ ತಂದಿದೆ.

ಮನೆಯ ಅಂದ ಹೆಚ್ಚಿಸುವ ಸಲುವಾಗಿ 5 ವರ್ಷದ ಹಿಂದೆ ಈ ವೀಳ್ಯದೆಲೆಯ ಬಳ್ಳಿಯನ್ನು ಮನೆಯ ಮುಂಭಾಗದಲ್ಲಿ ನೆಟ್ಟಿದ್ದೆ. ಅದು ಈಗ ಮನೆಯ ಎರಡನೆಯ ಮಹಡಿಯ ಎತ್ತರಕ್ಕೆ ಬೆಳೆದಿದೆ. ಬಳ್ಳಿಯು ಬಿಳಿ ಹೂ ಮೊಗ್ಗುಗಳನ್ನೂ ಬಿಟ್ಟಿದೆ. ಪ್ರಾರಂಭದಲ್ಲಿ ಅಗಲವಾದ ಎಲೆಗಳನ್ನು ಬಿಡುತ್ತಿದ್ದ ಬಳ್ಳಿಯು ಈಗ ಅದರ ಗಾತ್ರವನ್ನು ಚಿಕ್ಕದಾಗಿಸಿಕೊಂಡಿದೆ. ಸಮೃದ್ಧವಾಗಿ ಬೆಳೆದಿರುವ ಬಳ್ಳಿಯನ್ನು ನೋಡುವವರು ಈ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

—ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ

# ಮುಂಗುಸಿಗಾಗಿ ಮಿಡಿದ ಹೃದಯ

ಹಾಡಹಗಲಿನಲ್ಲಿ ಜಂಗಮವಾಣಿ ಎಡೆಬಿಡದೆ ರಿಂಗಣಿಸಿದಾಗ ಆ ಕಡೆಯಿಂದ ಪರಿಚಿತ ಧ್ವನಿಯೊಂದು ‘ಮೇಷ್ಟ್ರೇ ರೋಡಲ್ಲಿ ಯಾವುದೋ ಪ್ರಾಣಿಗೆ ಆಕ್ಸಿಡೆಂಟ್ ಆಗಿದೆ. ಏನು ಮಾಡೋದು’ ಎಂಬ ಪ್ರಶ್ನೆ ಕೇಳಿತು. ತಕ್ಷಣಕ್ಕೆ ಅದ್ಯಾವ ಜೀವಿಯೆಂದು ಹೊಳೆಯದಿದ್ದರೂ ಅವರು ನೀಡಿದ ವಿವರಣೆಯಿಂದ ಅದು ಮುಂಗುಸಿಯೇ ಎಂದು ಅಂದಾಜಿಸಿದೆ. ಅವರೊಂದಿಗಿದ್ದ ಶಿಕ್ಷಕರೊಬ್ಬರು ಅದರ ಚಿತ್ರಗಳನ್ನು ವಾಟ್ಸ್‌ಆ್ಯಪ್ ಮಾಡಿದಾಗ ಅದು ಖಾತರಿಯಾಯಿತು.

ನೋಡಲು ಸಪೂರವಾಗಿದ್ದ ಆ ಸುರಸುಂದರಾಂಗ ಮುಂಗುಸಿ ಅದಾಗಲೇ ಚಿರನಿದ್ರೆಗೆ ಜಾರಿತ್ತು. ಮುಂಗುಸಿ (Indian grey mongoose), ಇದೊಂದು ಸ್ತನಿ ವರ್ಗಕ್ಕೆ ಸೇರಿದ ಜೀವಿಯಾಗಿದ್ದು, ಹಗಲಿನಲ್ಲಿ ಹೆಚ್ಚು ಕ್ರಿಯಾಶೀಲವಾಗಿರುತ್ತದೆ. ನಾವೆಲ್ಲರೂ ಭಾವಿಸಿರುವಂತೆ ಇದಕ್ಕೆ ಹಾವು ವೈರಿಯಲ್ಲ. ಅದೊಂದು ಆಹಾರವಷ್ಟೆ. ಹಾವನ್ನು ವಿಧವಿಧವಾಗಿ ಬಳಲಿಸಿ ಬೇಟೆಯಾಡುವ ಮುಂಗುಸಿಗೆ ಅದರ ಕಡಿತದಿಂದ ಪಾರಾಗಲು ದೇಹದ ಮೇಲೆ ದಟ್ಟವಾದ ತುಪ್ಪಳಗಳೂ ಸಹಾಯಕ.

ಮುಂಗುಸಿಯ ತುಪ್ಪಳಗಳಿಂದ ನೂರಾರು ಆಲಂಕಾರಿಕ ಬ್ರಷ್‌ಗಳನ್ನು ತಯಾರಿಸಲಾಗುತ್ತದೆ. ಈ ಕಾರಣಕ್ಕೆ ಸಾವಿರಾರು ಸಂಖ್ಯೆಯಲ್ಲಿ ಇವುಗಳನ್ನು ಅಮಾನುಷವಾಗಿ ಕೊಲ್ಲಲಾಗುತ್ತದೆ. ವಾಸ್ತವವಾಗಿ ಇವುಗಳಿಗೆ ನಿಜವಾದ ವೈರಿ ಮನುಷ್ಯರೇ. ಏಳೆಂಟು ವರ್ಷಗಳ ಜೀವಿತಾವಧಿ ಹೊಂದಿರುವ ಈ ಜೀವಿಗಳು ಪರಿಸರ ಸಮತೋಲನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅಂದಹಾಗೆ ರಸ್ತೆಯಲ್ಲಿ ಮನುಷ್ಯರಿಗೆ ಅಪಘಾತವಾಗಿದ್ದರೂ ತಿರುಗಿಯೂ ನೋಡದ ಹೃದಯಹೀನರ ನಡುವೆ ಒಂದು ಮೂಕಜೀವಿಗಾದ ಅಪಘಾತಕ್ಕೆ ಮಿಡಿದು ಅದರ ಜೀವವುಳಿಸಲು ಯತ್ನಿಸಿದ ಮೇಷ್ಟ್ರು ಹಾಗೂ ಸಂಗಡಿಗರ ನಡೆ ಶ್ಲಾಘನೀಯವಾದದ್ದು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



# ದೇವರ ಫೋಟೊಗೂ ಹುಂಡಿ

ದೇವರ ಫೋಟೊಗಳು ಮಸುಕಾಗುತ್ತಿದ್ದಂತೆ ಅರಳಿ ಕಟ್ಟೆ ಕೆಳಗೋ, ಇಲ್ಲವೇ ನದಿಗೋ ಬಿಸಾಕಿ ಪರಿಸರ ಹಾಳುಗೆಡುವುದು ಪದ್ಧತಿಯಂತಾಗಿಹೋಗಿದೆ. ಇದನ್ನು ಮುರಿಯಲು ಸಾಗರದ ‘ಆನಂದ ಸಾಗರ’ ಮತ್ತು ‘ನೆರವಿನ ಕೈಗಳು’ ಎಂಬ ಎರಡು ಟ್ರಸ್ಟ್‌ಗಳು ‘ದೇವರ ಫೋಟೊ ಹುಂಡಿ’ ಅಭಿಯಾನ ಶುರು ಮಾಡಿವೆ.

ಈ ಟ್ರಸ್ಟ್ ವತಿಯಿಂದ ಸಾಗರದ ಮೂರು ದೇವಸ್ಥಾನಗಳಲ್ಲಿ ತಲಾ ಒಂದೊಂದು ಹುಂಡಿಯನ್ನು ಇಟ್ಟಿದ್ದು, ಈ ಹುಂಡಿಗಳಲ್ಲಿ ಹಣ ಹಾಕುವಂತಿಲ್ಲ. ಇಲ್ಲಿ ಹಾಕಬೇಕಾದದ್ದು ದೇವರ ಹಾಳಾದ ಫೋಟೊಗಳನ್ನು. ಸಾರ್ವಜನಿಕರು ತಮ್ಮ ಮನೆಯಲ್ಲಿರುವ ಹಳೆಯ, ಭಿನ್ನಗೊಂಡ ಮತ್ತು ಪೂಜೆಗೆ ಅರ್ಹವಲ್ಲದ ದೇವರ ಫೋಟೊಗಳನ್ನು ಹುಂಡಿಗೆ ಹಾಕುವಂತೆ ಟ್ರಸ್ಟ್ ವತಿಯಿಂದ ಜಾಗೃತಿ ಮೂಡಿಸಲಾಗುತ್ತಿದೆ. ಹುಂಡಿಯಲ್ಲಿ ಹಾಕಿದ ಫೋಟೊಗಳನ್ನು ಪ್ರತಿ ವಾರಕೊಮ್ಮೆ ಸಂಗ್ರಹಿಸಿ ಅವುಗಳ ಗಾಜು, ಕಟ್ಟು ಮತ್ತು ಚಿತ್ರಗಳನ್ನು ಬೇರ್ಪಡಿಸಿ ದೇವರ ಫೋಟೊಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲಾಗುತ್ತದೆ.

—ಅಂಜನ್ ಕಾಯ್ಕಿಣಿ, ಸಾಗರ